ಕರ್ನಾಟಕ ವಿಧಾನಸಭೆ

ಸೋಮವಾರ 18ನೇ ಜುಲೈ 2005ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 12 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದರು.

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

(ಅ) ವಿಷಯ: ಶಾಸಕರಿಗೆ ಇರುವ ಅಧಿಕಾರವನ್ನು ಮೊಟಕುಗೊಳಿಸಿರುವುದರ ಬಗ್ಗೆ.

(ಬಿ.ಜೆ.ಪಿ.ಸದಸ್ಯರು ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದರು)

ಡಾ: ಕೆ. ಅನ್ನದಾನಿ: ಮಾನ್ಯ ಅಧ್ಯಕ್ಷರೇ, ನಾವು ಮಾತನಾಡುತ್ತೇವೆ. ತಾವು ದಯಮಾಡಿ ನಮಗೆ ಅವಕಾಶವನ್ನು ಕೊಡಬೇಕು. ನಾವು ಇಲ್ಲಿ ಮಾತನಾಡುವುದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಎಲ್ಲಾ ಆದ ಮೇಲೆ ಇನ್ನು ಏನು ಇದೆ.

ಡಾ: ಕೆ. ಅನ್ನದಾನಿ: ಎರಡು ನಿಮಿಷ ಅವಕಾಶ ಕೊಡಿ.

ಶ್ರೀ ಹೆಚ್. ನಿಂಗಪ್ಪ (ಕುಣಿಗಲ್): ಮಾನ್ಯ ಅಧ್ಯಕ್ಷರೇ, ಇವತ್ತು ಶಾಸಕರಿಗೆ ಇರುವಂತಹ ಹಕ್ಕುಗಳ ಬಗ್ಗೆ ಮಾತನಾಡಬೇಕಾಗಿದೆ. ಇವತ್ತು ಗಂಗಾ ಕಲ್ಯಾಣ, ಮತ್ತು ಎಸ್.ಸಿ/ಎಸ್.ಟಿ. ಕಾರ್ಪೋರೇಷನ್‌ನಿಂದ ಇಂಡಿವಿಜ್ಯುಯಲ್ ಬೋರ್‌ವೆಲ್‌ಗಳನ್ನು ಕೊಡತಕ್ಕಂಥಾದ್ದು ಇತ್ತು, ಅದನ್ನೂ ಗ್ರಾಮ ಸಭೆಯಲ್ಲಿ ತೀರ್ಮಾನ ಮಾಡಬೇಕು. ಅಲ್ಲಿ ಹಂಚಿಕೆ ಯಾಗಬೇಕೆನ್ನುವಂಥಾದ್ದು ಇವತ್ತು ಸರ್ಕಾರದಿಂದ ಹೋಗಿರತಕ್ಕ ಸುತ್ತೋಲೆ. ಹಿಂದೆ ಶಾಸಕರು ಅಧ್ಯಕ್ಷರು ಆಗಿದ್ದರು. ಇವತ್ತು ಶಾಸಕರ ಅಧಿಕಾರವನ್ನು ಮೊಟಕುಗೊಳಿಸುವಂತಹ ಕೆಲಸ ನಡೆಯುತ್ತಿದೆ. ಆದುದರಿಂದ ಇವತ್ತು ಶಾಸಕರಿಗೆ ಸಂಪೂರ್ಣ ಅಧಿಕಾರವನ್ನು ಕೊಡಬೇಕು. ಇದರ ಜೊತೆಗೆ ಇವತ್ತು ನಾವು ವಿಕೇಂದ್ರೀಕರಣಕ್ಕೆ ವಿರೋಧವಾಗಿದ್ದೆವೆಂಬ ಮಾತನ್ನು ಹೇಳುತ್ತಾ ಇಲ್ಲ. ಇವತ್ತು ವಿಕೇಂದ್ರೀಕರಣಕ್ಕೆ ಒಂದು ಅರ್ಥ ಬಂದರೂ ಸಹಿತ, ಇಲ್ಲಿ ನಮಗೆ ಶಾಸಕರಿಗೆ ಅಧಿಕಾರ ಇರಬೇಕು, ಮತ್ತು ಶಾಸಕರು ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕು, ಮತ್ತು ಶಾಸಕರಿಗೆ ಅಂತಿಮ ತೀರ್ಮಾನ ಇರಬೇಕು. ಇದು ನಮ್ಮ ಬೇಡಿಕೆಯಾಗಿದೆ, ದಯಮಾಡಿ ಸರ್ಕಾರದವರು ಇದರ ಬಗ್ಗೆ ಗಮನವನ್ನು ಹರಿಸಬೇಕು.

ನಮಗೆ ಸ್ವಾತಂತ್ರ್ಯವನ್ನು ಕೊಡಬೇಕು. ಇವತ್ತು ಗ್ರಾಮೀಣ ಪ್ರದೇಶಕ್ಕೆ ಪ್ರವಾಸ ಹೋದಂತಹ ಸಂದರ್ಭದಲ್ಲಿ ಅವರು ನಮ್ಮನ್ನು ಕೇಳುತ್ತಾರೆ. ಸಾರ್, ಒಂದು ಸೈಟ್ ಕೊಟ್ಟಿಲ್ಲ, ಒಂದು ಮನೆಯನ್ನು ಕೊಟ್ಟಿಲ್ಲ, ಇವತ್ತು ರೇಷನ್‌ಕಾರ್ಡನ ಸಮಸ್ಯೆ ಬಗೆಹರಿದಿಲ್ಲ. ಇವತ್ತು ಗ್ರಾಮೀಣ ಪ್ರದೇಶದ ಜನತೆಯ ಸಮಸ್ಯೆಗಳನ್ನು ಚುನಾಯಿತ ಪ್ರತಿನಿಧಿಗಳಾಗಿ ಅವರ ಬಳಿ ಹೋದಂತಹ ಸಂದರ್ಭದಲ್ಲಿ ಅವರಿಗೆ ಸರಿಯಾದ ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ನಾವು ಇಲ್ಲ.

ಅಧ್ಯಕ್ಷರು: ಆ ವಿಷಯವೆಲ್ಲಾ ಚರ್ಚೆಯಾಗಿದೆ, ತಾವು ಕುಳಿತುಕೊಳ್ಳಿ.

ಡಾ: ಕೆ. ಅನ್ನದಾನಿ: ಮಾನ್ಯ ಅಧ್ಯಕ್ಷರೇ, ಎಲ್ಲಿ ಚರ್ಚೆಯಾಗಿದೆ? ದಯಮಾಡಿ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇಲ್ಲಿ ನಾವು ಯಾರೂ ಶಾಸಕರೇ ಅಲ್ಲವೆಂಬ ರೀತಿಯಲ್ಲಿ ಆಗಿದೆ. ನಮಗೆಲ್ಲ ಯಾವುದೇ ರೀತಿಯ ಅಧಿಕಾರ ಇಲ್ಲವೆಂಬ ರೀತಿಯಾಗಿದೆ. ದಯಮಾಡಿ, ನಾವು ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಸದನದಲ್ಲಿ ಮಾಡಿಕೊಡಬೇಕು. ಅದು ಆಗುವುದಿಲ್ಲವೆಂದರೆ, ನೀವು ಸದಸ್ಯರಲ್ಲ, ನಿಮಗೆ ಚರ್ಚೆ ಮಾಡುವುದಕ್ಕೆ ಅಧಿಕಾರವಿಲ್ಲವೆಂದು ಹೇಳಿ, ನಾವು ಹೊರಗಡೆ ಹೋಗುತ್ತೇವೆ.

ಅಧ್ಯಕ್ಷರು: ಆಯಿತು, ಇದೆಲ್ಲಾ ಚರ್ಚೆಯಾಗಿದೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಅಧ್ಯಕ್ಷರೇ, ಇದು ಚರ್ಚೆಯಾಗುವಂಥಾದ್ದು ತೀರ್ಮಾನವಾಗುವಂಥಾದ್ದು ಬೇರೆ, ಆದರೆ ಈ ಸದನದಲ್ಲಿರುವಂತಹ ಎಲ್ಲಾ ಬಹುತೇಕ ಸದಸ್ಯರು ಗ್ರಾಮೀಣ ಜನರ ಅಭಿವೃದ್ಧಿಗೆ ಮತ್ತು ಬಡವರ ಪರವಾಗಿ ಕೆಲಸವನ್ನು ಮಾಡುವಂಥಾದ್ದು ನಮ್ಮ ಪರಮೋದ್ದೇಶವಾಗಿದೆ. ನಾವು ಈ ಸದನಕ್ಕೆ ಶಾಸಕರಾಗಿ ಬಂದು 14 ತಿಂಗಳುಗಳಾಗಿವೆ. ಇಲ್ಲಿ ಯಾವ ಒಬ್ಬ ಶಾಸಕನು ಯಾವ ಊರಿನಲ್ಲಾದರೂ ಒಂದು ಮನೆಯನ್ನು ಕೊಡುವುದಕ್ಕಾಗಲಿ, ಒಂದು ಸೈಟನ್ನು ಕೊಡುವುದಕ್ಕಾಗಲಿ, ಅದು ಏನೂ ಮಾಡುವುದಕ್ಕೆ ಆಗದೆ ಇದ್ದ ಮೇಲೆ ನಾವು ಈ ಸದನದಲ್ಲಿ ಸದಸ್ಯರಾಗಿ ಮುಂದುವರೆಯುವುದರಲ್ಲಿ ಏನು ಅರ್ಥ ಇದೆ? ಆದುದರಿಂದ ಮಾನ್ಯ ಅಧ್ಯಕ್ಷರೇ, ಬರೀ ಮಂತ್ರಿಗಳಾಗಿ, ಕೆಂಪುದೀಪಗಳನ್ನು ಹಾಕಿಕೊಂಡು ತಿರುಗಿದಾಕ್ಷಣಕ್ಕೆ ಸರ್ಕಾರ ಎಂದು ಅನಿಸಿಕೊಳ್ಳುವುದಿಲ್ಲ. ಈಗ ಬಡವರಿಗೆ, ರೈತರಿಗೆ ಬಡ್ಡಿ ಮನ್ನಾ ಮಾಡಿ ಎಂದು ಕೇಳುವಂಥಾದ್ದು.

(ಗೊಂದಲ)

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೇ, ನೀವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ನಾನು ಮಾತನಾಡುತ್ತಿದ್ದೇನೆ. ನಾನು ಈಲ್ಡ್ ಆಗಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಅರುಣಾಚಲದ ಸ್ಪೀಕರ್ ಬಂದಿರುವಂಥಾದ್ದನ್ನು ಗುರುತಿಸಿ, ಅವರಿಗೆ ಸ್ವಾಗತವನ್ನು ಕೋರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

2.ಪ್ರಕಟಣೆ:

ಅಧ್ಯಕ್ಷರು : ಈಗ ಅರುಣಾಚಲ ಪ್ರದೇಶದ ಸ್ಪೀಕರ್ ಆಗಿರುವಂತಹ ಮಾನ್ಯ ಸೆಟಾಂಗ್‌ಟ್ಯಾಂಗ್ ಅವರು, ಅವರ ಶ್ರೀಮತಿಯವರೊಡನೆ, ನಮ್ಮ ಸದನದ ಕಾರ್ಯಕಲಾಪಗಳನ್ನು ವೀಕ್ಷಿಸಲು ಆಗಮಿಸಿದ್ದಾರೆ. ಅವರಿಗೆ ಈ ಸದನದ ಎಲ್ಲಾ ಸದಸ್ಯರ ಪರವಾಗಿ ಸ್ವಾಗತ ಕೋರುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ:– ನಿವೇಶನ, ಮನೆ ಹಂಚಿಕೆ ಮುಂತಾದವುಗಳಲ್ಲಿ ಶಾಸಕರಿಗೆ ಇರುವ ಅಧಿಕಾರವನ್ನು ಮೊಟಕುಗೊಳಿಸಿರುವುದರ ಬಗ್ಗೆ (ಮುಂದುವರೆದ ಚರ್ಚೆ).

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ವಿಷಾದದಿಂದ ಹೇಳುವಂತಹ ಸಂಗತಿಯಾಗಿದೆ. ಎಲ್ಲಾ ಸದಸ್ಯರ ಅಭಿಪ್ರಾಯದಂತೆ ಸರ್ಕಾರ ಕೆಲಸ ಕಾರ್ಯಗಳನ್ನು ನಿರ್ವಹಿಸುವಂಥಾದ್ದನ್ನು ನಾವೆಲ್ಲರೂ ಬಯಸುತ್ತೇವೆ. ಆದರೆ ಇಷ್ಟೊಂದು ಹಠಮಾರಿತನ ಮಾಡುವಂಥಾದ್ದು ಯಾರಿಗೂ ಶೋಭೆ ತರುವಂಥಾದ್ದು ಅಲ್ಲ. ನಾವು ಇಲ್ಲಿ ಬಡವರ ಬಗ್ಗೆ ಹೆಚ್ಚು ಕಳಕಳಿಯನ್ನು ಇಟ್ಟುಕೊಂಡು ಅವರಿಗೆ ಸೈಟ್ ಕೊಡುವಂಥಾದ್ದು ಇರಬಹುದು, ಮನೆ ಕೊಡುವಂಥಾದ್ದು ಇರಬಹುದು, ಮತ್ತೆ ಈಗಾಗಲೇ ಬಡವರಿಗಾಗಿ 3 ರೂ. ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದೇವೆ. ಅದೇ ರೀತಿಯಲ್ಲಿ ನಿರ್ಗತಿಕರಿಗೂ ಕೂಡ ಮನೆ, ವಸತಿಗಳನ್ನು ಕೊಡುವಂಥಾದ್ದು, ನಮ್ಮ ಪರಮ ಕರ್ತವ್ಯವಿದ್ದರೂ ಕೂಡ, ಈಗ 14 ತಿಂಗಳುಗಳಾದರೂ ಕೂಡ ನಾವು ಇದುವರೆಗೂ ಒಂದು ನಿವೇಶನವನ್ನಾಗಲಿ, ಮನೆಯನ್ನಾಗಲಿ, ಮಂಜೂರು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇಂತಹ ಸನ್ನಿವೇಶದಲ್ಲಿ ನಾವು ಅನಿವಾರ್ಯವಾಗಿ ಈಗ ವಿರೋಧಪಕ್ಷದವರು ಧರಣಿ ಮಾಡುವಂಥಾದ್ದಕ್ಕೆ ಬೇಡಿಕೆಯನ್ನು ಏನು

ಇಟ್ಟಿದ್ದಾರೆ, ಅದಕ್ಕೆ ಬಹುತೇಕ ಇಲ್ಲಿರುವಂತಹ ಎಲ್ಲಾ ಸದಸ್ಯರು ಕೂಡ ಆ ಬೇಡಿಕೆಗೆ ಬೆಂಬಲ ಮತ್ತು ಸಹಮತ ವ್ಯಕ್ತಪಡಿಸುವಂಥಾದ್ದು ನಮ್ಮೆಲ್ಲರ ಪರಮ ಕರ್ತವ್ಯವಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ಮಾನ್ಯ ನಿಂಗಪ್ಪನವರು ತಮಗೆ ಮನವರಿಕೆಯನ್ನು ಮಾಡಿಕೊಟ್ಟಿರುವಂಥಾದ್ದು, ಅದರ ಬಗ್ಗೆ ಸರ್ಕಾರಕ್ಕೆ ಸೂಚನೆಯನ್ನು ಕೊಡಬೇಕೆಂಬ ಮನವಿಯನ್ನು ಕೊಟ್ಟಿದ್ದಾರೆ. ಆ ಮನವಿ ಸಾಧುವಾಗಿದೆ, ಅದಕ್ಕೆ ತಾವೂ ಕೂಡ ಸ್ಪಂದಿಸಬೇಕು, ಸರ್ಕಾರ ಸೂಚನೆಯನ್ನು ಕೊಡಬೇಕೆಂದು ನಾನೂ ಕೂಡ ಹೇಳುತ್ತೇವೆ. ತಾವು ಸ್ವಲ್ಪ ಸೂಚನೆಯನ್ನು ಕೊಡಬೇಕು. ಅದು ತಪ್ಪಿದಲ್ಲಿ ನಾವು ಅನಿವಾರ್ಯವಾಗಿ ಮುಂದೆ ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಎಲ್ಲಾ ಚರ್ಚೆಯಾಗಿದೆ. ಸರ್ಕಾರದ ಜೊತೆಗೆ ಚರ್ಚೆ ಆಗಿದೆ, ಅದನ್ನು ಪದೇ ಪದೇ ಎಲ್ಲರೂ ಮಾತನಾಡುವ ಅಗತ್ಯ ಇಲ್ಲ. This is too much.

ಡಾ: ಕೆ. ಅನ್ನದಾನಿ (ಮಳವಳ್ಳಿ): ಮಾನ್ಯ ಅಧ್ಯಕ್ಷರೇ, ಇದು ಸದನದಲ್ಲಿ ಚರ್ಚೆಯಾಗಲಿ, ನಮಗೂ ಅವಕಾಶವನ್ನು ಕೊಡಿ. ಈಗ ಆಶ್ರಯ ಸಮಿತಿಯನ್ನು ಇದುವರೆಗೂ ಮಾಡಿಲ್ಲ. ಅದನ್ನು ಗ್ರಾಮ ಪಂಚಾಯತ್ ಮಟ್ಟಕ್ಕೆ ಕೊಡಬೇಕೆಂದು ಎಲ್ಲೋ ಒಂದು ಘೋಷಣೆಯಾಗಿದೆ, ಎನ್ನುವಂಥ ಒಂದು ಕಾರ್ಯಕ್ರಮವನ್ನು ವಿಧಾನಸಭೆಯ ಒಳಗಡೆ ಮಂಡಿಸಿದ್ದೀರಿ. ಇವತ್ತಿನವರೆಗೂ 14 ತಿಂಗಳುಗಳಾದರೂ ಆಶ್ರಯ ಸಮಿತಿಯ ರಚನೆಯಾಗಿಲ್ಲ. ಬೇರೆ ಬೇರೆ ಸಮಿತಿಗಳೂ ಕೂಡ ಇದುವರೆಗೂ ಆಗಿಲ್ಲ. ಇತ್ತೀಚೆಗೆ ಒಂದೋ, ಎರಡೋ, ಸಮಿತಿಗಳು ಆಗಿರಬಹುದು. ಆದರೆ ಆಶ್ರಯ ಸಮಿತಿ, ಮತ್ತೆ ಈ ಸರ್ಕಾರವನ್ನು ಯಾರಿಗಾಗಿ ನಡೆಸುತ್ತಿರುವುದು ನಾವು? ಅದು ಗ್ರಾಮೀಣ ಪ್ರದೇಶದಲ್ಲಿರುವಂತಹ ಬಡವರಿಗಾಗಿ, ನಗರ ಪ್ರದೇಶದಲ್ಲಿರುವಂತಹ ಬಡವರಿಗಾಗಿ, ಬಡವರಿಗೋಸ್ಕರ ಮತ್ತು ಮಧ್ಯಮ ವರ್ಗದ ಜನರಿಗೋಸ್ಕರ, ಇವತ್ತು ಸರ್ಕಾರವನ್ನು ನಡೆಸಬೇಕಾಗಿದೆ. ಶ್ರೀಮಂತರ ಪರವಾಗಿ ನಾವು ಸರ್ಕಾರ ನಡೆಸುತ್ತೇವೆ ಎನ್ನತಕ್ಕಂಥ ಒಂದೇ ಒಂದು ಮಾತನ್ನು ತಾವು ಹೇಳಿದರೆ ಸದಸ್ಯರಾದ ನಾವ್ಯಾರೂ ಇಲ್ಲಿ ಮಾತನಾಡುವುದಿಲ್ಲ. ಸದನದಲ್ಲಿ ಎಲ್ಲರೂ ಶ್ರೀಮಂತರ ಪರವಾಗಿ ಇದ್ದುಬಿಡೋಣ. ಅಥವಾ ನಾವು ಬಡವರ ಪರವಾಗಿ ಕೆಲಸ ಮಾಡಬೇಕು ಎನ್ನುವುದಾದರೆ, ಇವತ್ತಿನವರೆಗೆ 'ಆಶ್ರಯ' ಸಮಿತಿಯನ್ನು ಏಕೆ ಮಾಡಿಲ್ಲ ಎಂದು ಕೇಳುತ್ತಿದ್ದೇನೆ. ಅದನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಕೊಡಬೇಕು

ಎನ್ನುವ ಒಂದು ಘೋಷಣೆಯನ್ನು ನಾವು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಸರ್ಕಾರ ಹೇಳುತ್ತಿದೆ. ಈ ಸಮಿತಿಗಳನ್ನು ಮಾಡಿದಂಥ ಸಂದರ್ಭದಲ್ಲಿ ಸರಿಯಾದ ರೀತಿ ಪಾರದರ್ಶಕತೆಯನ್ನು ನಾವು ಕಾಯ್ದುಕೊಂಡು ಹೋಗಬೇಕು. ಎರಡನೆಯದಾಗಿ, ಮೊನ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಒಂದು ಆದೇಶ ಬಂದಿದೆ. ಈ ಹೊಸ ಆದೇಶ ಎಲ್ಲೂ ಘೋಷಣೆಯಾಗಿಲ್ಲ, ಅದೇನೆಂದರೆ, ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಎಸ್.ಸಿ:ಎಸ್.ಟಿ. ಜನಾಂಗದವರಿಗೆ ಗುಂಪು ಮತ್ತು ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಸಿಕೊಡತಕ್ಕಂಥ ಸಮಿತಿಯ ಅಧ್ಯಕ್ಷತೆಯನ್ನು ಗ್ರಾಮಪಂಚಾಯಿತಿ ಮಟ್ಟಕ್ಕೆ ಕೊಡಲಾಗಿದೆ ಎನ್ನುವುದು. ಇದುವರೆಗೂ ಈ ಯೋಜನೆಯ ಫಲಾನುಭವಿಗಳನ್ನು ಸೆಲೆಕ್ಷನ್ ಮಾಡತಕ್ಕಂಥಾದ್ದನ್ನು ಶಾಸಕರೇ ಮಾಡಬೇಕು ಎನ್ನುವ ಅಧಿಕಾರ ಇತ್ತು. ಇದರ ಬಗ್ಗೆ ಯಾವುದೇ ರೀತಿಯ ದೂರು ಇದುವರೆಗೂ ಯಾರಿಂದಲೂ ಬಂದಿರಲಿಲ್ಲ. ಶಾಸಕರು ಹೀಗೆ ಮಾಡುತ್ತಾರೆ ಎಂದು ಹೇಳತಕ್ಕಂಥಾದ್ದು, ಆ ಬಗ್ಗೆ ದೂರತಕ್ಕಂಥ ಯಾವುದೇ ದೂರು ಗ್ರಾಮೀಣ ಪ್ರದೇಶದಿಂದಾಗಲೀ ಅಥವಾ ಹಳ್ಳಿಯ ಜನರಿಂದಾಗಲೀ,ಎಸ್.ಸಿ ಎಸ್.ಟಿ.ಜನರಿಂದಾಗಲೀ ಬಂದಿರಲಿಲ್ಲ. ಆದರೆ ಈಗ ಅದನ್ನು ತಕ್ಷಣದಿಂದ ನಮ್ಮಿಂದ ಕಸಿದುಕೊಂಡು, ಆ ಸಮಿತಿಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಕೊಟ್ಟಿದ್ದೀರಿ ಅಲ್ಲಿ ಅವರು ಫಲಾನುಭವಿಗಳನ್ನು ಆಯ್ಕೆ ಮಾಡಿ ಕಳುಹಿಸುತ್ತಾರೆ ಎನ್ನುವುದಾದರೆ, ನಾವು ಆ ವಿಷಯದಲ್ಲಿ ತಪ್ಪು ಮಾಡುತ್ತೇವೆ, ಅವರು ತಪ್ಪು ಮಾಡುವುದಿಲ್ಲ ಎನ್ನುವಂತಾಗುತ್ತದಲ್ಲವೇ? ಈ ಒಂದು ಉದ್ದೇಶದಿಂದ ನೀವು ಇದನ್ನು ಮಾಡುತ್ತಿದ್ದೀರಲ್ಲವೇ? ಹಾಗಾದರೆ, ಶಾಸಕರಾಡ ನಮ್ಮ ಅಧಿಕಾರವೇನು? ದಯಮಾಡಿ ಸದನಕ್ಕೆ ನೀವು ಅದನ್ನು ತಿಳಿಸಬೇಕು. ಇವತ್ತು ಬಿ ಜೆ ಪಿ ಯವರು ಧರಣಿ ಮಾಡುತ್ತಿದ್ದಾರೆ. ಅವರು ಯಾರಿಗಾಗಿ ಧರಣಿ ಮಾಡುತ್ತಿದ್ದಾರೆ? ಅಧಿಕಾರ ನಡೆಸುತ್ತಿರತಕ್ಕಂಥ ಪಕ್ಷದಲ್ಲಿರತಕ್ಕಂಥ ನಾವೂ ಶಾಸಕರೇ, ಅವರೂ ಶಾಸಕರೇ, ನಮ್ಮ ನಮ್ಮ ಪಕ್ಷಗಳು ಏನಿದ್ದರೂ ಹೊರಗಡೆ ಮಾತ್ರ. ನಾವು ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಒಂದು ಪಕ್ಷ ಬೇಕು, ಒಂದು ಸಿಂಬಲ್ ಬೇಕು. ಆ ಸಿಂಬಲ್ ಮೇಲೆ ನಾವು ಗೆದ್ದು ಬರುತ್ತೇವೆ. ಅದಕ್ಕಾಗಿ ನಮಗೆ ಒಂದು ಪಕ್ಷ ಬೇಕು. ಗೆದ್ದು ಸದನಕ್ಕೆ ಬಂದ ಮೇಲೆ ನಾವೆಲ್ಲರೂ ಶಾಸಕರು. ಶಾಸಕರಾಗಿ ಅವರು, ಈ ಬಗ್ಗೆ ಬೇಡಿಕೆಯನ್ನಿಟ್ಟು ಸುಮಾರು

ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಅದಕ್ಕೆ ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ ಮತ್ತು ಆಡಳಿತ ಪಕ್ಷದಲ್ಲಿರತಕ್ಕಂಥ ನಮಗೂ ಕೂಡ ಸಮಸ್ಯೆಗಳಿವೆ, ನೋವಿದೆ. ಆ ನೋವನ್ನು ನೀವು ಅರ್ಥಮಾಡಿಕೊಳ್ಳುತ್ತಿಲ್ಲ; ನಮಗೆ ಅವಕಾಶ ಮಾಡಿಕೊಡುವುದಿಲ್ಲ. ನಮಗೆ ಎಷ್ಟು ನೋವಾಗುತ್ತಿದೆಯೆಂದರೆ, ಇವತ್ತು ನನ್ನ ಕ್ಷೇತ್ರದಲ್ಲಿ ಜನಗಳು ಬೇರೆಯವರ ಮನೆಯ ಪಡಸಾಲೆಯಲ್ಲಿ ಮಲಗುತ್ತಿದ್ದಾರೆ.

ಅಧ್ಯಕ್ಷರು: ಅನ್ನದಾನಿಯವರೇ, ಸಾಕು. ತಾವು ಹೇಳಬೇಕಾದುದ್ದನ್ನೆಲ್ಲಾ ಹೇಳಿದ್ದೀರಿ.

ಡಾ: ಕೆ. ಅನ್ನದಾನಿ: ದಯಮಾಡಿ ಒಂದೇ ಒಂದು ನಿಮಿಷ ನಾನು ಮಾತನಾಡುತ್ತೇನೆ. 'ಆಶ್ರಯ' ಸಮಿತಿಯವರು ಮನೆಗಳನ್ನು ಕೊಡುತ್ತಾರೆ ಎಂದು ಸರ್ಕಾರದ ಮೇಲೆ ಭರವಸೆಯನ್ನಿಟ್ಟು ಜನರು ಕೂಲಿ ಮಾಡಿಯೋ ಅಥವಾ ಎಲ್ಲೋ ಸಾಲ ಮಾಡಿಯೋ ಐದು ಸಾವಿರ ರೂಪಾಯಿಗಳನ್ನು ಹೊಂದಿಸಿದ್ದಾರೆ, 'ಆಶ್ರಯ' ಮನೆ ಕೊಡುತ್ತಾರೆಂದು ಇದ್ದ ಗುಡಿಸಲನ್ನೂ ಕಿತ್ತುಹಾಕಿದ್ದು, ಇವತ್ತು ಬೇರೆಯವರ ಪಡಸಾಲೆಯ ಮೇಲೆ ಮಲಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿರುವಂಥ ಈ ಸಂದರ್ಭದಲ್ಲಿ ನೀವು ದಯಮಾಡಿ ಯಾವುದಾದರೂ ಒಂದು ನಿರ್ಧಾರ ತೆಗೆದುಕೊಂಡು, ಶಾಸಕರಿಗೆ ಹೆಚ್ಚಿನ ಅಧಿಕಾರವನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದರೆ ನಾವು, ನೀವು ಎಲ್ಲರೂ ಉಳಿದುಕೊಳ್ಳತಕ್ಕಂಥ ಪ್ರಯತ್ನವಾಗುತ್ತದೆ. ನೀವೂ ಕೂಡ ಶಾಸಕರಾಗಿದ್ದು, ಆ ಜಾಗದಲ್ಲಿದ್ದೀರಿ. ದಯಮಾಡಿ ಇದನ್ನು ಪರಾಮರ್ಶೆ ಮಾಡಬೇಕು ಎಂದುಈ ಸದನದ ಮೂಲಕ ತಮಗೆ ಮನವಿ ಮಾಡಲು ಇಷ್ಟಪಡುತ್ತಿದ್ದೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ (ಬೀರೂರು): ಮಾನ್ಯ ಅಧ್ಯಕ್ಷರೇ, ನಾನು ನನ್ನ ಅಭಿಪ್ರಾಯವನ್ನು ಹೇಳಲು ಇಚ್ಛಿಸುತ್ತೇನೆ. ಎಲ್ಲೋ ಒಂದು ಕಡೆ ಕಾಣದ ಕೈ ಶಾಸಕರ ಕುತ್ತಿಗೆಯನ್ನು ಹಿಸುಕುತ್ತಿದೆ. ಇವತ್ತಿನ ದಿವಸ ವಿರೋಧ ಪಕ್ಷದ ಸದಸ್ಯರು ಬಾವಿಗೆ ಬಂದಿರುವುದು ಅವರೊಬ್ಬರಿಗೋಸ್ಕರವಾಗಿ ಅಲ್ಲ. ಶಾಸಕರ ಹಕ್ಕನ್ನು ಮೊಟಕು ಮಾಡುವ ಪ್ರಯತ್ನ ನಡೆಯುತ್ತಿದೆ.

ಅಧ್ಯಕ್ಷರು: ದಯಮಾಡಿ ಎಲ್ಲಾ ಸದಸ್ಯರು ತಮ್ಮತಮ್ಮ ಸ್ಥಾನಗಳಿಗೆ ಹೋಗಬೇಕು. ಬಿ.ಎ.ಸಿ.ಯಲ್ಲಿ ಕೆಲವು ವಿಷಯಗಳು ಚರ್ಚೆಯಾಗಿವೆ. ಆ ಬಗ್ಗೆ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ಈಗಾಗಲೇ

ಎಲ್ಲಾ ಮಾತುಕತೆಯಾಗಿದೆ. ದಯಮಾಡಿ ತಮ್ಮತಮ್ಮ ಸ್ಥಾನಗಳಿಗೆ ಹೋಗಿ, ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ.

(ಧರಣಿ ನಿರತ ಬಿ.ಜೆ.ಪಿ ಯ ಸದಸ್ಯರುಗಳು ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಮತ್ತು ಸದನದ ಎಲ್ಲಾ ಪಕ್ಷಗಳ ನಾಯಕರುಗಳ ಜೊತೆಗೆ, ಸದನದ ದೈನಂದಿನ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಕರೆದು, ಈಗ ನಡೆಸುತ್ತಿರುವ ಧರಣಿ ಸಂಬಂಧದಲ್ಲಿ, ವಿರೋಧ ಪಕ್ಷದ ನಾಯಕರು ಮತ್ತು ಶಾಸಕರುಗಳು ಇಟ್ಟಿರತಕ್ಕಂಥ ಬೇಡಿಕೆಗಳ ವಿಚಾರದಲ್ಲಿ ಕೂಲಂಕುಷವಾಗಿ ಚರ್ಚೆ ನಡೆದು ಒಂದು ಒಳ್ಳೆಯ ಸದಭಿಪ್ರಾಯಕ್ಕೆ ಬಂದಿದ್ದೇವೆ. ಅದಕ್ಕೆ ಸಹಕಾರ ಮಾಡಿರತಕ್ಕಂಥ ಎಲ್ಲಾ ವಿರೋಧ ಪಕ್ಷದ ನಾಯಕರುಗಳಿಗೆ ಮತ್ತು ಶಾಸಕ ಮಿತ್ರರುಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಮ್ಮ ಘನ ಅಧ್ಯಕ್ಷತೆಯಲ್ಲಿ ನಡೆದಂಥ ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಇದ್ದಂಥ ಆ ಸಭೆಯಲ್ಲಿ ಈ ಬಿಕ್ಕಟ್ಟು ಶಮನವಾಗಿದೆ. ಕಂದಾಯ ಇಲಾಖೆಯ ಅಡಿಯಲ್ಲಿ ಬರತಕ್ಕಂಥ ಭೂನ್ಯಾಯ ಮಂಡಳಿ, ಅಕ್ರಮ ಸಕ್ರಮ ಸಮಿತಿ ಮತ್ತು ಆರಾಧನಾ ಸಮಿತಿ ಈ ಮೂರು ಸಮಿತಿಗಳನ್ನು ಕೂಡಲೇ ರಚನೆ ಮಾಡಬೇಕು ಎನ್ನತಕ್ಕಂಥಾದ್ದು ಆಗಿದೆ. ಈಗಾಗಲೇ ಸುಮಾರು 25–30 ಸಮಿತಿಗಳು ರಚನೆಯಾಗಿದ್ದು, ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದು ಅಧಿಕೃತವಾದಂಥ ಆದೇಶವಾಗಿದೆ. ಇದರ ಜೊತೆಗೆ, ಈಗ ಬಂದಿರತಕ್ಕಂಥ ಕಡತಗಳನ್ನು ಇಟ್ಟುಕೊಂಡಿದ್ದೇವೆ. ಆಗಸ್ಟ್ 5ನೇ ತಾರೀಖಿನೊಳಗಾಗಿ ಈ ಮೂರೂ ಸಮಿತಿಗಳನ್ನು ರಚನೆ ಮಾಡುತ್ತೇವೆ. 'ಆರಾಧನ ಸಮಿತಿಗೆ' ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಆ ಸಮಿತಿಗೆ ನಾಲ್ಕು ಜನ ಸದಸ್ಯರುಗಳಿರುತ್ತಾರೆ. ಯಾರ್ಯಾರು ಸದಸ್ಯರಾಗಿರಬೇಕು ಎಂದು ಶಾಸಕರು ಬಯಸುತ್ತಾರೋ, ಅವರ ಹೆಸರುಗಳನ್ನು ಬೇಗನೇ ಕೊಡತಕ್ಕಂಥಾದ್ದು ಆಗಬೇಕು. ಏಕೆಂದರೆ, ಬಹಳ ಜನ ಸದಸ್ಯರುಗಳು ಹೆಸರುಗಳನ್ನು ಕೊಟ್ಟಿಲ್ಲ. ಕೊಡದೇ ಇದ್ದಂಥವರು ಬೇಗನೇ ಹೆಸರುಗಳನ್ನು ಕೊಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಆಕಸ್ಮಾತ್ ಆಗಸ್ಟ್ 5ನೇ ತಾರೀಖಿನೊಳಗಾಗಿ ನೀವು ಹೆಸರುಗಳನ್ನು